ಪದ್ಧತಿಯಾಗಿದೆ. ಈಗ ನಮ್ಮದೇ ಆದಂಥ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಈಗಾಗಲೇ ಪ್ರೇಮ್ ಮಾಡಿದ್ದೇನೆ, ಅದು ಈಗಾಗಲೇ ಫೈನಲ್ ಸ್ಟೇಜ್‌ನಲ್ಲಿದೆ, ಅದನ್ನು ಕಾರ್ಯರೂಪಕ್ಕೆ ತಂದ ಕೂಡಲೇ ನಮ್ಮ ಇಲಾಖೆಗೆ ಇಂಜಿನಿಯರ್‌ಗಳನ್ನು ನಾವು ನೇಮಕ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ, ಇಂಜಿನಿಯರ್‌ಗಳ ಕೊರತೆ ಇದೆ, 45 ಇಂಜಿನಿಯರ್‌ಗಳನ್ನು ನಿಯೋಜನೆ ಮೇರೆಗೆ ಅತಿ ಶೀಘ್ರದಲ್ಲಿ ನಿಯೋಜನೆ ಮೇರೆಗೆ ಕಳುಹಿಸಿ ಕೊಡಲಿಕ್ಕೆ ಲೋಕೋಪಯೋಗಿ ಇಲಾಖೆಗೆ ನಾವು ವಿನಂತಿಸಿಕೊಳ್ಳುತ್ತೇವೆ.

ಶ್ರೀ ಯು.ಆರ್. ಸಭಾಪತಿ: ಒಬ್ಬ ಸಹಾಯಕ ಇಂಜಿನಿಯರ್ ಎಷ್ಟು ಗ್ರಾಮ ಪಂಚಾಯಿತಿಗಳನ್ನು ನಿಭಾಯಿಸಬಹುದು. ಈ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಕೆ.ಬಿ. ಕೋಳಿವಾಡ್: ಸರ್ಕಾರದ ನಿಲುವು, ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಒಬ್ಬ ಸಹಾಯಕ ಇಂಜಿನಿಯರ್ ಇರತಕ್ಕಂಥ ಮಾಹಿತಿ ನನ್ನ ಹತ್ತಿರ ಇಲ್ಲ. ಬೇಕಾದರೆ ಯಾವ ಜೂನಿಯರ್ ಇಂಜಿನಿಯರ್‌ಗೆ ಎಷ್ಟು ಗ್ರಾಮ ಪಂಚಾಯಿತಿ, ಸಹಾಯಕ ಇಂಜಿನಿಯರ್ ಎಷ್ಟು ಗ್ರಾಮ ಪಂಚಾಯಿತಿ, ಅನ್ನತಕ್ಕಂತ ವಿವರಣೆ ಇದೆ ಬೇಕಾದರೆ ಅದನ್ನು ಕೊಡುತ್ತೇನೆ.

ಶ್ರೀ ಯು.ಆರ್. ಸಭಾಪತಿ: ಒಬ್ಬ ಇಂಜಿನಿಯರ್ 11 ಗ್ರಾಮ ಪಂಚಾಯಿತಿಗಳನ್ನು ನಿಭಾಯಿಸುವುದಕ್ಕೆ ಸಾಧ್ಯವೆ? ಸರ್ಕಾರದ ಮುಂದಿನ ನಿಲುವು ಏನು? ಒಬ್ಬ ಸಹಾಯಕ ಇಂಜಿನಿಯರ್ ಎಷ್ಟು ಗ್ರಾಮ ಪಂಚಾಯಿತಿಗಳನ್ನು ನಿಭಾಯಿಸುವ ಹಾಗೆ ಸರ್ಕಾರ ಮುಂದಿನ ದಿನಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಕೆ.ಬಿ. ಕೋಳಿವಾಡ್: ಕೊರತೆ ಇದೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಒಬ್ಬ ಸಹಾಯಕ, ಅಸಿಸ್ಟೆಂಟ್ ಇಂಜಿನಿಯರ್‌ಗೆ ಎಷ್ಟು ಆಗಬೇಕು ಎನ್ನುವ ನಿಯಮ ಇಲಾಖೆಯಲ್ಲಿ ಇದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ, ನಾನು ತಿಳಿದುಕೊಂಡು ಹೇಳುತ್ತೇನೆ.

ಶ್ರೀ ಕೆ. ಗೋಪಾಲ್ ಪೂಜಾರಿ: ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ದಿವಸ ಗ್ರಾಮ ಪಂಚಾಯಿತಿಗಳಲ್ಲಿ ಅಂದಾಜು ಪಟ್ಟಿಯನ್ನು ತಯಾರು ಮಾಡತಕ್ಕಂಥದ್ದರಲ್ಲಿ ಬಹಳಷ್ಟು ವಿಳಂಬವಾಗುತ್ತಿದೆ. ಹಾಗೆಯೇ, ನನ್ನ ಕ್ಷೇತ್ರದಲ್ಲಿ ಜೂನಿಯರ್ ಇಂಜಿನಿಯರ್ ಹುದ್ದೆಗಳು ಬಹಳಷ್ಟು ಖಾಲಿ ಇವೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಬಹಳಷ್ಟು ಸಾರಿ ಪ್ರಸ್ತಾವನೆಯನ್ನು ಕೊಟ್ಟಿದ್ದರೂ ಸಹ ಈ ತನಕ ಸದರಿ ಪೋಸ್ಟ್‌ಗಳು ಭರ್ತಿಯಾಗಿಲ್ಲ. ಆದ್ದರಿಂದ ಖಾಲಿ ಇರತಕ್ಕಂಥ ಜೂನಿಯರ್ ಇಂಜಿನಿಯರ್ ಪೋಸ್ಟ್‌ಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ನಮ್ಮ ತಾಲ್ಲೂಕು ಬಹಳ ಕಷ್ಟದ ಪರಿಸ್ಥಿತಿಯಲ್ಲಿದೆ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ಅಧ್ಯಕ್ಷರೆ, ಎರಡು ದಿವಸಗಳ ಹಿಂದೆ ಎಲ್ಲೆಲ್ಲಿ ಖಾಲಿ ಪೋಸ್ಟ್‌ಗಳಿವೆ ಅವೆಲ್ಲವನ್ನೂ ತುಂಬುವುದಕ್ಕೆ ಪ್ರಸ್ತಾಪನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಪುನಃ ಎಲ್ಲೆಲ್ಲಿ ಖಾಲಿ ಪೋಸ್ಟ್ ಇದೆ ಎನ್ನತಕ್ಕಂಥ ಒಂದು ಫೈನಲ್ ಲಿಸ್ಟ್‌ನ್ನು ತರಿಸಿಕೊಂಡು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರನ್ನು ನಿಯೋಜನೆ ಮೇಲೆ ಕರೆಸಿಕೊಂಡು ರೀ–ಪೋಸ್ಟಿಂಗ್ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶಿವಮೊಗ್ಗ ನಗರದ ಆಯುರ್ವೇದ ಆಸ್ಪತ್ರೆಯ ಕಟ್ಟಡವನ್ನು ಪೂರ್ಣಗೊಳಿಸುವ ಬಗ್ಗೆ

385(3270) ಶ್ರೀ ಚಂದ್ರಶೇಖರ್ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದ ಆಯುರ್ವೇದ ಆಸ್ಪತ್ರೆ ಕಟ್ಟಡ ಕಾಮಗಾರಿ ಯಾವಾಗ ಪೂರ್ಣಗೊಳಿಸಲಾಗುವುದು; ಹಾಲಿ ಯಾವ ಹಂತದಲ್ಲಿದೆ;

ಆ) ಈವರೆಗೆ ಭರಿಸಲಾದ ಹಣದ ಮೊತ್ತವೆಷ್ಟು?

ಶ್ರೀಮತಿ ನಫೀಸ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು):

ಅ) ಶಿವಮೊಗ್ಗ ಜಿಲ್ಲೆ ಸರ್ಕಾರಿ ಆಯುರ್ವೇದ ಆಸ್ಪತ್ರೆಯನ್ನು ರೂ. 50.00 ಲಕ್ಷ ವೆಚ್ಚದಲ್ಲಿ ಕ್ರಮ ಕೈಗೊಂಡಿದ್ದು ಹಾಲಿ ಕಟ್ಟಡ ಮೇಲೆ ಚಾವಣಿಯ ಹಂತದವರೆಗೆ ಕಾಮಗಾರಿ ಪ್ರಗತಿಯಲ್ಲಿದೆ. ಶೀಘ್ರವಾಗಿ ಕಾಮಗಾರಿ ಪೂರ್ಣಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ.

ಆ) ರೂ. 11.00 ಲಕ್ಷ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೆ, 50 ಲಕ್ಷ ರೂಪಾಯಿ ಅಂದಾಜಿನಲ್ಲಿ ಸದರಿ ಕಟ್ಟಡದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಒಂದು ಸರ್ಕಾರಿ ಆಯರ್ವೇದದ ಆಸ್ಪತ್ರೆ ಹೆಚ್ಚಿನ ರೀತಿಯಲ್ಲಿ ಅವಶ್ಯಕತೆ ಇದೆ. ಇತ್ತೀಚಿನ ದಿನಗಳಲ್ಲಿ ಆಯುರ್ವೇದ ಚಿಕಿತ್ಸೆಗೆ ಹೆಚ್ಚಿನ ಜನವರು ಮಾರುಹೋಗಿದ್ದಾರೆ. ಆದ್ದರಿಂದ, ಸದರಿ ಕಟ್ಟಡ ಪೂರ್ಣವಾಗಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸದರಿ ಕಟ್ಟಡದ ಕಾಮಗಾರಿ 10 ವರ್ಷಗಳ ಹಿಂದೆಯೇ ಪ್ರಾರಂಭವಾಗಿತ್ತು. ಆದರೆ ಇನ್ನೂ ಮುಗಿದಿಲ್ಲ. ಇದು ಯಾವಾಗ ಮುಗಿಯುತ್ತದೆ ಎನ್ನತಕ್ಕಂಥದ್ದು ನಮಗೆ ಆಶ್ಚರ್ಯವಾಗಿದೆ. ಆದ್ದರಿಂದ ಮಾನ್ಯ ಸಚಿವರು ಅಲ್ಲಿಗೆ ಪ್ರವಾಸ ಮಾಡಿ ಅದನ್ನು ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಮಾನ್ಯ ಸಚಿವರು ಇದುವರೆಗೂ ಎಲ್ಲಿಗೂ ಕೂಡ ಪ್ರವಾಸ ಮಾಡಿಲ್ಲ. ಈಗ ಅಲ್ಲಿರತಕ್ಕಂಥ ಕಟ್ಟಡ ನೋಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ತಾವು ಅಲ್ಲಿಗೆ ಬಂದು ಸದರಿ ಕಟ್ಟಡವನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಎಲ್ಲಿಗೂ ಕೂಡ ಪ್ರವಾಸ ಮಾಡಿಲ್ಲವೆಂದು ಎಲ್ಲಾ ಶಾಸಕರು ಹೇಳಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ದಯವಿಟ್ಟು ಆ ಭಾಗಕ್ಕೆ ಬಂದು ಸದರಿ ಕಟ್ಟಡದ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಮತ್ತು ಅದು ಯಾವ ಸ್ಥಿತಿಯಲ್ಲಿದೆ ಎಂಬುದನ್ನು ನೋಡಿ ತಕ್ಷಣವೇ ತೀರ್ಮಾನ ತೆಗೆದುಕೊಂಡರೆ ನಿಜವಾಗಿಯೂ ಕೂಡ ಅಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಾಗೆಯೇ ನಮಗೂ ಕೂಡ ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಅಲ್ಲಿಗೆ ದಯವಿಟ್ಟು ಬರಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಇಲಾಖೆಯವರು ಒಂದು ಉತ್ತರ ಕೊಟ್ಟಿದ್ದಾರೆ. ಮತ್ತೆ ತಾವೊಂದು ಉತ್ತರ ಕೊಟ್ಟಿದ್ದೀರಿ. ಇಲ್ಲಿ ಇಬ್ಬರು ಗುತ್ತಿಗೆದಾರರು ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಒಬ್ಬರು ಅಕ್ಟೋಬರ್ 31ನೇ ತಾರೀಖಿನೊಳಗೆ ಕೆಲಸ ಮುಗಿಸುತ್ತೇವೆಂದು ಹೇಳಿದ್ದಾರೆ. ಮತ್ತೆ ಇಲಾಖೆಯವರು ಈಗಾಗಲೇ 11 ಲಕ್ಷ ರೂಪಾಯಿಗಳಲ್ಲಿ ಕೆಲಸ ಮುಗಿಸಿಕೊಡುತ್ತೇವೆಂದು ಹೇಳಿದ್ದಾರೆ. ಒಟ್ಟಿನಲ್ಲಿ ಇವರಿಬ್ಬರಲ್ಲಿ ಹೊಂದಾಣಿಕೆ ಇಲ್ಲ. ಆ ಕಟ್ಟಡವನ್ನು